ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 38/2018 ಸಿಡಬ್ಲೂ: 18 ಪಿ ಡಬ್ಲೂ: 6**

| | |
|---|---|
| ಹೆಸರು | ಪ್ರಭಾಮಣಿ |
| ಗಂಡನ ಹೆಸರು | ನಂಜುಂಡಸ್ವಾಮಿ |
| ವಯಸ್ಸು | 43 ವರ್ಷ |
| ವೃತ್ತಿ | ಗೃಹಿಣಿ |
| ವಾಸ | ಕಳಸ್ತವಾಡಿ ಗ್ರಾಮ |

ದಿನಾಂಕಃ 25.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ಪುಟ್ಟಸಿದ್ದಮ್ಮ ನನ್ನ ತಾಯಿಯಾಗಿದ್ದು, ಆಕೆ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ದಿಃ 15.01.2018 ರಂದು ನನ್ನ ತಂದೆ ಟಿ ವಿ ಎಸ್ ಜುಪಿಟರ್ ವಾಹನವನ್ನು ಮನೆಯಿಂದ ಲಕ್ಷದೀಪೋತ್ಸವ ನೋಡಲು ನನ್ನ ತಾಯಿಯನ್ನು ಹಿಂಬದಿಯಲ್ಲಿ ಕೂರಿಸಿಕೊಂಡು ಬರುತ್ತಿದ್ದರು. ಆಗ ಕೆ ಎಸ್ ಆರ್ ಟಿ ಸಿ ಬಸ್ ಚಾಲಕ ಹಿಂದೆ ಯಿಂದ ಬಂದು ನನ್ನ ತಂದೆ ಓಡಿಸುತ್ತಿದ್ದ ದ್ವಿ ಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿರುವುದಾಗಿ ನೋಡಿರುವುದಾಗಿ ನಮಗೆ ಫೋನ್ ಮಾಡಿ ತಿಳಿಸಿರುತ್ತಾರೆ. ನನ್ನ ತಂದೆ ಚಲಾಯಿಸುತ್ತಿದ್ದ ದ್ವಿಚಕ್ರ ವಾಹನದ ಸಂ. ಕೆಎ-09-8003 ಆಗಿರುತ್ತದೆ. ಸದರಿ ವಾಹನವು ನನ್ನ ಹೆಸರಿನಲ್ಲಿದೆ. ಅಪಘಾತವಾದ ನಂತರ ಸದರಿ ವಾಹನವು ಠಾಣೆಯಲ್ಲಿದ್ದು, ಅದನ್ನು ಸೂಕ್ತ ದಾಖಲಾತಿ ಕೊಟ್ಟು ಬಿಡಿಸಿಕೊಂಡಿರುತ್ತೇನೆ. ಸಾಕ್ಷಿ ನೊಟೀಸನ್ನು ನೋಡಿ ಪೊಲೀಸ್ ಅದನ್ನು ನೀಡಿರುವುದಾಗಿ ಗುರುತಿಸಿರುತ್ತಾರೆ. ಸದರಿ ನೊಟೀಸನ್ನು ನಿಪಿ 7 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ7(ಎ) ಎಂದು ಗುರುತಿಸಲಾಗಿದೆ. ಸದರಿ ನೋಟೀಸ್ ಗೆ ನಾನು ಮರುಉತ್ತರವನ್ನು ನೀಡಿರುತ್ತೇನೆ. ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದು, ನಿಪಿ 8 ಎಂದು, ಸಾಕ್ಷಿಯ ಸಹಿಯನ್ನು ನಿಪಿ8(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಇಂಡೆಮ್ ನಿಟಿ ಬಾಂಡ್ ಅನ್ನು

ನೋಡಿ ಅದನ್ನು ನಿಪಿ 9 ಎಂದು ಸಾಕ್ಷಿಯ ಸಹಿಯನ್ನು ನಿಪಿ 9(ಎ) ಎಂದು ಗುರುತಿಸಲಾಗಿದೆ. ನಾನು ಪ್ರಮಾಣ ಪತ್ರವನ್ನು ಕೊಟ್ಟಿರುವ ಬಗ್ಗೆ ನನ್ನ ಪತಿಗೆ ಗೊತ್ತು. ನನ್ನ ತಂದೆ ದೂರನ್ನು ನೀಡುವಾಗ ನನ್ನ ವಾಹನದ ಸಂಖ್ಯೆಯನ್ನು ಕೆಎ-09-ಹೆಚ್ ಎನ್ -8004 ಎಂದು ನೀಡಿದ್ದು ನಾನು ಪ್ರಮಾಣಪತ್ರವನ್ನು ನೀಡಿದ್ದು, ಸರಿಯಾಗಿ ಸಂಖ್ಯೆ ಕೆಎ-09- ಹೆಚ್ ಎನ್-8003 ಎಂದು ತಿಳಿರುತ್ತೇನೆ. ಸಾಕ್ಷಿ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ 10(ಎ) ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಸ್ ಪಿ ವಕೀಲರಿಂದಃ

ಪೊಲೀಸ್ ನೀಡಿದ ನೋಟೀಸ್ ನ ಮಾಹಿತಿ ನನಗೆ ಗೊತ್ತು, ನನಗೆ ಅದರ ಒಕ್ಕಣಿಕೆ ಗೊತ್ತಿಲ್ಲ. ನನಗೆ ನಾನು ಪೊಲೀಸರಿಗೆ ಹಾಜರುಪಡಿಸಿರುವ ಎಲ್ಲಾ ದಾಖಲಾತಿಯ ಒಕ್ಕಣಿಕೆ ಬಗ್ಗೆ ಗೊತ್ತಿಲ್ಲ, ಅದರ ಬಗ್ಗೆ ನನ್ನ ಪತಿಗೆ ಗೊತ್ತು, ಸಹಿ ಮಾತ್ರ ನನ್ನದಾಗಿರುತ್ತದೆ. ವಾಹನದ ಸಂಖ್ಯೆ ತಪ್ಪಾಗಿ ನಮೂದಾಗಿರುವ ವಿಷಯ ಸಹ ನನಗೆ ಗೊತ್ತಿಲ್ಲ ಎಂದರೆ ಸರಿ. ಅಪಘಾತವು ಕೆ ಎಸ್ ಆರ್ ಟಿ ಸಿ ವಾಹನ ಚಾಲಕನ ತಪ್ಪಿನಿಂದ ಆಗಿಲ್ಲ, ಬೇರೆ ವಾಹನದ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*